Sri A.M.Belliyappa
(Minister of State for Fisheries, Ports & Inland Water Transport.):-

a) No.

b) Does not arise.

c) Recently ,Government have issued the leasing policy for lease of Government brakishwater lands for prawn farming and according to the leasing policy, preference will be given to qualified unemployed youths.

d) No.

e) Does not arise.

ಶ್ರೀ ಬಾಬುರಾವ್ ಚಿಂಚನಸೂರ್ :- ಮಾನ್ಯ ಅಧ್ಯಕ್ಷರೇ, ಬೇರೆಯವರಿಗೆ ದೊಡ್ಡ ದೊಡ್ಡ ಸಾಹುಕಾರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಹಾಗಾದರೆ ಕಡುಬಡವರ ಹಾಗೂ ಕಡುಬಡವ ಮೀನುಗಾರರ ಗತಿ ಏನಾಗಬೇಕೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಎಮ್. ಬೆಳ್ಳಿಯಪ್ಪ(ಮೀನುಗಾರಿಕೆ ಮತ್ತು ಬಂದರು ಸಚಿವರು) :- ಮಾನ್ಯ ಅಧ್ಯಕ್ಷರೇ, ಪ್ರೈವೇಟ್ ಪರ್ಸನ್ಸ್‌ಗೆ ಕೆಲವು ಸ್ಥಳಗಳನ್ನು ಕೊಡಬೇಕೆಂದು ಕೂಡ ಸರ್ಕಾರದಲ್ಲಿ ಅಭಿಪ್ರಾಯವುಂಟು. ಆದರೂ ಕೂಡ ಬಡವರಿಗೆ ಮತ್ತು ನಿರುದ್ಯೋಗಿ ಯುವಕರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮತ್ತು ಫಿಷರ್‌ಮ್ಯಾನ್ ಕೋ-ಆಪರೇಟಿವ್ ಸೊಸೈಟಿಗೆ ಹಂಚಿಕೆ ಮಾಡಿ ಬಾಕಿ ಇರುವುದನ್ನು ಇವರಿಗೆ ಕೊಡುತ್ತೇವೆ.

ಶ್ರೀ ಬಾಬುರಾವ್ ಚಿಂಚನಸೂರ್:- ಹಾಗಾದರೆ ಆ ಬಡವರ ಗತಿ ಏನು? ಇವತ್ತು ನಿರುದ್ಯೋಗಿ ಯುವಕರು ಕೆಲಸ ಇಲ್ಲದೆ ಬಾಂಬೆಗೆ ಹೋಗಿ ಸೇರುತ್ತಿದ್ದಾರೆ. ಬೇರೆ ಕಡೆಗೆ ಹೋಗುತ್ತಿದ್ದಾರೆ. ದೊಡ್ಡ ದೊಡ್ಡ ಸಾಹುಕಾರರಿಗೆ ಇದನ್ನು ಕೊಟ್ಟರೆ ಬಡವರ ಗತಿ ಏನು? ಆದ್ದರಿಂದ ತಾವು ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗಿಗಳಿಗೆ ಕೊಟ್ಟು ಸಹಾಯ ಮಾಡಬೇಕೆದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಮ್. ಬೆಳ್ಳಿಯಪ್ಪ:- ಇದು ಸರ್ಕಾರದ ನಿರ್ಧಾರ. ಬಡವರಿಗೆ ಅಥವಾ ನಿರುದ್ಯೋಗಿಗಳಿಗೆ ಮೊದಲು ಕೊಟ್ಟು ನಂತರ ಬಾಕಿ ಇರುವ ಸ್ಥಳಗಳನ್ನು ನಾವು ಆದಷ್ಟು ಪ್ರೈವೇಟ್ ಪರ್ಸನ್ಸ್‌ಗೆ ಕೊಡುತ್ತೇವೆ.

ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚಿನ ಜಮೀನು ಪಡೆದ ಜಮೀನುದಾರರಿಂದ ಸರ್ಕಾರ ವಶಪಡಿಸಿಕೊಂಡ ಜಮೀನು.

445 (2141) ಶ್ರೀ ಕರಿಯಣ್ಣ (ಹೊಳಹೊನ್ನೂರು)-

ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ -

ಅ) ಸರ್ಕಾರ ಕಾನೂನು ರೀತಿ ನಗದಿ ಮಾಡಿದ ಸೀಲಿಂಗ್ ಲಿಮಿಟ್ ಪ್ರಕಾರ ರಾಜ್ಯದಲ್ಲಿ ಜಮೀನುದಾರರಿಂದ ಸರ್ಕಾರಕ್ಕೆ ಎಷ್ಟು ಜಮೀನು ಬಂದಿರುತ್ತದೆ(ತಿಳಿಸುವುದು) ;

ಆ) ಒಂದು ಪಕ್ಷ ಯಾವುದೇ ಜಮೀನು ಬಾರದೇ ಇದ್ದರೆ ನಡೆದ ಅಕ್ರಮವನ್ನು ಯಾವ ರೀತಿ

ಪತ್ತೆ ಮಾಡಲಾಗುವುದು?

ಇ) ಒಂದು ಪಕ್ಷ ವಂಚನೆ ಮಾಡಿದವರು ಸರ್ಕಾರದ ಗಮನಕ್ಕೆ ಬಂದರೆ ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)-

ಅ) 1. ಹೆಚ್ಚುವರಿ ಜಮೀನು ನಿಗದಿಪಡಿಸಿದ್ದು 2,73,613 ಎಕರೆ

2. ಸ್ವಾಧೀನಪಡಿಸಿಕೊಡಿರುವ ಜಮೀನು 1,54,747 ಎಕರೆ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲು ಕರ್ನಾಟಕ ಭೂಸುಧಾರಣಾ ಕಾಯ್ದೆ, 1961ರಲ್ಲಿ ಅವಕಾಶವಿದೆ.

ಶ್ರೀ ಕರಿಯಣ್ಣ :- ಮಾನ್ಯ ಉಪಾಧ್ಯಕ್ಷಿಣಿಯವರೇ ಹೆಚ್ಚುವರಿ ಜಮೀನು 2,73,713 ಎಕರೆ ಇದೆ ಎಂದು ಗುರುತಿಸಿದ್ದಾರೆ. ಗುರುತಿಸುವುದಕ್ಕೆ ಏನು ಆಧಾರ ಇಟ್ಟುಕೊಂಡಿದ್ದಾರೆ ಅನ್ನತಕ್ಕಂಥಾದ್ದನ್ನು ತಿಳಿಸಬೇಕು. ಇದರ ಜೊತೆಯಲ್ಲಿ ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ 1,54,747 ಎಕರೆ ಎಂದು ಹೇಳಿದ್ದಾರೆ. ಆದರೆ ಸ್ವಾಧೀನಪಡಿಸಿಕೊಂಡಿದ್ದು ಈಗ ನಿಮ್ಮ ಸರ್ಕಾರದ ವಶದಲ್ಲಿ ಇದೆಯೇ ? ಯಾರಿಗೆ ಹಂಚಬೇಕೆಂದು ಇದ್ದೀರಿ ? ಸರ್ಕಾರದವಶದಲ್ಲಿ ಇದ್ದರೆ ಅದನ್ನು ಯಾರಿಗೆ ಹಂಚಿದ್ದೀರಿ? ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆ ಇದೆ ಅನ್ನತಕ್ಕಂಥಾದ್ದನ್ನು ತಾವು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಇದನ್ನು ಸೆಕ್ಷನ್ 66 ರ ಕೆಳಗೆ ಲ್ಯಾಂಡ್ ಲಾರ್ಡ್ಸ್ ಡಿಕ್ಲರೇಷನ್ ಫೈಲ್ ಮಾಡುತ್ತಾರೆಯಾರಿಗೆ 40 ಎಕರೆಗಿಂತ ಹೆಚ್ಚಿಗೆ ಭೂಮಿ ಇರುತ್ತದೋ ಅವೆರೆಲ್ಲರೂ ಕೂಡ ಡಿಕ್ಲರೇಷನ್ ಫೈಲ್ ಮಾಡಬೇಕು. 40ಎಕರೆ ಅಂದರೆ 'ಡಿ' ಕ್ಲಾಸ್ ಲ್ಯಾಂಡ್. ಅವರೆಲ್ಲರೂ ಡಿಕ್ಲರೇಷನ್ ಫೈಲ್ ಮಾಡಬೇಕೆನ್ನತಕ್ಕಂಥ ಆದೇಶವನ್ನು ಮತ್ತು ಗಡುವನ್ನು 74 ರಲ್ಲಿ ಹಾಕಲಾಗಿತ್ತು. ಇಷ್ಟು ದಿವಸದಲ್ಲಿ ಎಲ್ಲರೂ ಡಿಕ್ಲರೇಷನ್ ಫೈಲ್ ಮಾಡಬೇಕು, ಆದರ ಪ್ರಕಾರ ಸುಮಾರು 1,42,374 ಜನರು ಡಿಕ್ಲರೇಷನ್ ಫೈಲ್ ಮಾಡಿದ್ದರು. ಅದರೊಳಗೆ ಸುಮಾರು 1,42,089 ಡಿಕ್ಲರೇಷನ್ಸ್‌ಗಳು ಡಿಸ್ಪೋಸ್ ಆಫ್ ಆಗಿವೆ. ಬ್ಯಾಲೆನ್ಸ್ ಕೇವಲ 285 ಮಾತ್ರ. ಹೈಕೋರ್ಟ್‌ನಲ್ಲಿ ಮತ್ತು ಟ್ರಿಬ್ಯುನಲ್ ಮುಂದೆ ಇವತ್ತು ಉಳಿದಿವೆ. ತಾವು ಕೇಳಿದಿರಿ ಮುಂದೆ ಈ ಜಮೀನನ್ನು, ಅಂದರೆ ವಶಪಡಿಸಿಕೊಂಡಂಥ ಜಮೀನನ್ನು ಏನು ಮಾಡುತ್ತೀರಿ ಹಾಗೂ ಯಾರಿಗೆ ಹಂಚುತ್ತೀರಿ ಎಂದು . ಕಾನೂನು ಪ್ರಕಾರ ಲ್ಯಾಂಡ್ ಟ್ರಿಬ್ಯುನಲ್‌ನವರು ಏನು ಡಿಟರ್‌ಮಿನ್ಡ್ ಮಾಡಿದ್ದಾರೆ, ಇವತ್ತು ಎಕ್ಸ್‌ಟೆಂಟ್ 2,73,613 ಎಕರೆಗಳು they have determined as surplus. ಅದರಲ್ಲಿ ಸುಮಾರು 1,34,747 ಎಕರೆ ನಾವು ವಶಪಡಿಸಿಕೊಂಡಿದ್ದೇವೆ. ಅಂದರೆ ನಮ್ಮ ವಶಕ್ಕೆ ತೆಗೆದುಕೊಂಡಿದ್ದೇವೆ ತೆಗೆದುಕೊಂಡ ಆ 1,34,000 ಸಾವಿರ ಎಕರೆಯಲ್ಲಿ ಸುಮಾರು 1,14,709 ಎಕರೆ ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಮತ್ತೆ ಅದರ ಫಲಾನುಭವಿಗಳು ಸುಮಾರು 29,708 landless persons in the state . ಅದರಲ್ಲಿ 73,753 ಎಕರೆ has been distributed to 18,549 persons belonging to Scheduled Castes and Scheduled Tribes. ಅಂದರೆ ಅಧ್ಯಕ್ಷರೇ, 1,14,709 ಎಕರೆಯಲ್ಲಿ ಸುಮಾರು 73,753 ಎಕರೆ, ಅಂದರೆ

more than 50% land has been distributed to Scheduled Castes and Schsduled Tribes pepole and the remaining land distributed among landless persons in the state. ಈ ರೀತಿಯಾಗಿ ಹಂಚಿಕೆಯನ್ನು ಕಾನೂನು ರೀತಿಯಲ್ಲಿ ಮಾಡಿದ್ದೇವೆ.

ಶ್ರೀ ಅಂಜನಮೂರ್ತಿ :- ಸಭಾಧ್ಯಕ್ಷರೇ, ಮಾನ್ಯ ಸಚಿವರು, ಸುಮಾರು ಒಂದು ಲಕ್ಷ ಎಕರೆ ಜಮೀನನ್ನು ಸರ್ಕಾರ ವಶಪಡಿಸಿಕೊಂಡಿದೆ; ಅದರಲ್ಲಿ ಸುಮಾರು 75 ಸಾವಿರ ಎಕರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಹಂಚಲಾಗಿದೆ ಎಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ, ಇದು ಸತ್ಯಕ್ಕೆ ದೂರವಾದ ಮಾತು. ಕಾರಣ ಯಾವ ದೊಡ್ಡ ಜಮೀನುದಾರರಿಂದ ಸರ್ಕಾರ ವಶಪಡಿಸಿಕೊಂಡಿದೆಯೋ ಅದು ಇವತ್ತಿಗೂ ದೊಡ್ಡ ಜಮೀನುದಾರರ ಹತ್ತಿರವೇ ಇದೆ. ಪೇಪರ್‌ನಲ್ಲಿ ಮಾತ್ರ ಬಡವರಿಗೆ, ಭೂ ರಹಿತರಿಗೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇಲ್ಲಿ ಸತ್ಯಕ್ಕೆ ದೂರವಾದ ಮಾಹಿತಿ ಕೊಟ್ಟಿದ್ದಾರೆಂದು ನಾನು ಭಾವಿಸಿದ್ದೇನೆ. ಇದನ್ನು ತನಿಖೆ ಮಾಡಿಸಿ, ನಿಜವಾಗಿ ಯಾರಿಗೆ ದೊರಕುತ್ತದೋ ಅವರಿಗೆ ದೊರಕಿಸಿಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ನನ್ನ ಹತ್ತಿರ ಇರತಕ್ಕಂಥ ಅಂಕಿ ಸಂಖ್ಯೆಯ ಪ್ರಕಾರ ನಾನು ಈಗಾಗಲೇ ಹೇಳಿದ್ದೇನೆ. ಕೆಲವು ಜನ ಸ್ವೇ ತಂದು ಅವರ ಪೊಸಿಷನ್‌ನಲ್ಲೇ ಇಟ್ಟುಕೊಂಡಿರಬಹುದು. ಇಂತಹ ಸುಮಾರು 285 ಕೇಸ್‌ಗಳಿವೆ . ನನ್ನ ಹತ್ತಿರ ಈಗಾಗಲೇ ಇರತಕ್ಕಂಥ ಮಾಹಿತಿ ಪ್ರಕಾರ ಇಷ್ಟು ಹಂಚಿದ್ದೇವೆ, ಉಳಿದ ಸುಮಾರು 13,977 ಎಕರೆ ಪಬ್ಲಿಕ್ ಪರ್ಪಸ್‌ಗೆ ಮಾತ್ರ ರಿಸರ್ವ್ ಮಾಡಿಟ್ಟಿದ್ದೇವೆ, ಮತ್ತು ಉಳಿದಂಥ ಲಿಟಿಗೇಷನಲ್ಲಿ ಸುಮಾರು 1,45,000 ಎಕರೆ ಇದೆ. ಇದರ ಬಗ್ಗೆ ಟ್ರಿಬ್ಯುನಲ್‌ನವರಾಗಲೀ, ಹೈಕೋರ್ಟ್‌ನವರಾಗಲೀ ನಿರ್ಣಯವನ್ನು ತೆಗೆದುಕೊಂಡ ಮೇಲೆ ಅದನ್ನು ಹಂಚಲು ಸಾಧ್ಯವಾಗುತ್ತದೆ. ಬಹುಶಃ ತಾವುಗಳು ಅದರ ಬಗ್ಗೆ ರೆಫರ್ ಮಾಡುತ್ತಿದ್ದೀರೋ ಏನೊ ನನಗೆ ಗೊತ್ತಿಲ್ಲ. ಒಂದು ವೇಳೆ ಹಂಚಿದ ಜಮೀನನ್ನು ಸರ್‌ಪ್ಲಸ್ ಎಂದು ಡಿಕ್ಲೇರ್ ಮಾಡಿ, ಬೆನಿಫಿಷಿಯರ್ಸ್‌ಗೆ ಕೊಟ್ಟ ಜಮೀನನ್ನು ತಿರುಗಿ ರ‍್ಯಾಂಡ್‌ಲಾರ್ಡ್ಸ್ ತಮ್ಮ ಕಬ್ಜಾದಲ್ಲಿ ತೆಗೆದುಕೊಂಡಿದ್ದಾರೆ ಎಂಬ ಅಭಿಪ್ರಾಯವು ತಮ್ಮದ್ದಾಗಿದ್ದರೆ ಅಂಥ ಕೇಸಸ್‌ಅನ್ನು ನನ್ನ ಗಮನಕ್ಕೆ ತಂದರೆ, definitely I will take action against such officers those who have not acted according to the Land Reforms Act.

ಡಾ. ಎ. ಬಿ. ಮಾಲಕರೆಡ್ಡಿ : ಹೆಚ್ಚುವರಿ ಭೂಮಿಯನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಹಂಚುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಇದೊಂದು ಯಾಂತ್ರಿಕ ಕಾರ್ಯಕ್ರಮವಾಗಬಾರದು. ಹೆಚ್ಚುವರಿ ಭೂಮಿಯನ್ನು ಸಾಮಾನ್ಯವಾಗಿ ಬಡವರಿಗೆ ಹಂಚುತ್ತಾರೆ. ಹೀಗೆ ಹಂಚಿದ ಮೇಲೆ ಇದರಿಂದ ಫಲ ಪಡೆಯತಕ್ಕಂಥ ಫಲಾನುಭವಿಗಳು ಸರಿಯಾಗಿ ವಿಚಾರ್ಮ ಮಾಡಿ ಬೆಳೆಯನ್ನು ತೆಗೆಯಲು ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡಬೇಕು. ಅವರು ಎತ್ತು ಕೊಂಡುಕೊಳ್ಳುವುದಕ್ಕಾಗಲಿ ಅಥವ ಜಮೀನು ಅಭಿವೃದ್ಧಿ ಮಾಡುವುದಕ್ಕಾಗಲಿ ಸರಕಾರದವರು ಏನಾದರೂ ಹಣದ ವ್ಯವಸ್ಥೆ ಮಾಡಿದ್ದಾರೆಯೇ ಎಂಬುದು ಬಹಳ ಮುಖ್ಯವಾದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ಅವರು ಹೇಳುವುದರಲ್ಲಿ ಖಂಡಿತವಾಗಿಯೂ ಅರ್ಥ ಇದೆ. ಇದನ್ನು ಗಮನಿಸಿಕೊಂಡು ಕೇಂದ್ರ ಮತ್ತು ರಾಜ್ಯ ಸರಕಾರದವರು

ಸೇರಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದರಂತೆ ಸುಮಾರು ಒಂದು ಹೆಕ್ಟೇರ್‌ಗೆ ಎರಡೂವರೆ ಸಾವಿರದಷ್ಟು ಇಂಪ್ರೂವ್‌ಮೆಂಟ್‌ಗಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸಹಾಯ ಮಾಡಬೇಕೆಂದು ಇದೆ. ಇಂಥ ಸಲಹೆಯನ್ನು ರಾಷ್ಟ್ರೀಯ ಕಂದಾಯ ಮಂತ್ರಿಗಳ ಸಭೆಯಲ್ಲಿ ಪ್ರಧಾನಿಯವರಿಗೆ ನಾವುಗಳು ಸಲಹೆಯನ್ನು ಕೊಟ್ಟಿದ್ದೇವೆ. ಈ ಎರಡೂವರೆ ಸಾವಿರ ರೂಪಾಯಿಗಳು ಒಂದು ಹೆಕ್ಟೇರ್‌ಗೆ ಸಾಕಾಗುವುದಿಲ್ಲ, ಕನಿಷ್ಟಪಕ್ಷ ಅದನ್ನು 5 ಸಾವಿರ ಮಾಡಬೇಕೆಂದು ನಾವು ಸಲಹೆಯನ್ನು ಕೊಟ್ಟಿದ್ದೇವೆ. ಅದು 50:50 ಪರ್‌ಸೆಂಟ್ ಬೇಸಿಸ್ ಮೇಲೆ ಅಂದರೆ ಕೇಂದ್ರದವರು ಐದು ಸಾವಿರಗಳನ್ನು ಕೊಟ್ಟರೆ, ರಾಜ್ಯದವರು ಕೂಡ ಐದು ಸಾವಿರಗಳನ್ನು ಕೊಟ್ಟು ಆ ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಮಾಡಬೇಕೆಂದು ಉದ್ದೇಶ ಇದೆ. ಆ ಒಂದು ದೃಷ್ಟಿಯಿಂದ ನಾವು ರಿಕ್ವೆಸ್ಟ್ ಮಾಡಿ ಕೊಂಡಿದ್ದೇವೆ. ಆ ಪ್ರಪೋಸಲ್ಸ್‌ನ್ನು ಕೇಂದ್ರದವರೂ ಕೂಡ ಒಪ್ಪಬಹುದು, ಇದಲ್ಲದೇ ಇನ್ನೂ ಅನೇಕ ಪ್ರೋಗ್ರಾಂಸ್ ಏನಿವೆ, ಅದು ಯಾವುದೇ ಇರಬಹುದು, ಬೇರೆ ಯೋಜನೆಗಳಲ್ಲಿ ಅವರಿಗೆ ಎತ್ತು, ಬಂಡಿ, ಮುಂತಾದವುಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಆ ಒಂದು ಆದೇಶವನ್ನು ಕೂಡ ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷಣಿಯವರೇ, ಈ ಸೀಲಿಂಗ್ ಲಿಮಿಟ್ ಆಕ್ಟ್‌ನಲ್ಲಿ ಒಟ್ಟು ಎಷ್ಟು ಎಕ್ಸೆಸ್ ಲ್ಯಾಂಡ್ ಇದೆ ಎಂಬುದನ್ನು ಗುರುತಿಸಿದ್ದೀರಾ ಎಂದು ನಾನು ಪ್ರಶ್ನೆಯಲ್ಲಿ ಮೂಲಭೂತವಾಗಿ ಕೇಳಿದ್ದೇನೆ. ಅವರು ಇಷ್ಟು ಎಕ್ಸೆಸ್ ಲ್ಯಾಂಡ್‌ನ್ನು ನಾವು ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಅವರಾಗಿಯೇ ಯಾರು ಡಿಕ್ಲೆರೇಷನ್ ಕೊಟ್ಟಿದ್ದಾರೆ ಅದನ್ನು ಮಾತ್ರ ಹೇಳಿದ್ದಾರೆ. ಆದರೆ ಸರಕಾರದಲ್ಲಿ ಯಾರ್ಯಾರದ್ದು ಹೆಚ್ಚುವರಿ ಭೂಮಿ ಇದೆ ಎಂಬ ಬಗ್ಗೆ ಪಟ್ಟಿ ಇದೆ. ಇನ್ನೂ ಅನೇಕ ಜನರು ಡಿಕ್ಲರೇಷನ್ಸ್ ಕೊಟ್ಟಿಲ್ಲ. ಹೀಗೆ ಕೊಟ್ಟಿಲ್ಲದವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಮತ್ತು ಎಷ್ಟು ಇಂಥ ಭೂಮಿ ಇದೆ ಎಂಬುದನ್ನು ಸರಕಾರದವರು ಗುರುತಿಸಿದ್ದಾರೆಯೇ ಎಂಬುದನ್ನು ನಾನು ಕೇಳುತ್ತೇನೆ. ಆದರೆ ಅವರೆ ಇಂತಿಷ್ಟು ಡಿಕ್ಲೆರೇಷನ್ಸ್ ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತಾರೆ. ಕಳ್ಳನ ಹತ್ತಿರ ನೀನು ಎಷ್ಟು ಕದ್ದಿದ್ದೀಯಾ ಎಂದು ಕೇಳಿದರೆ ಅವನು ಬಾಯಿ ಬಿಡುತ್ತಾನೆಯೇ ?ಅವರು ಕೊಟ್ಟಷ್ಟು ಸರಿ ಎಂದು ಹೇಳುವುದಕ್ಕಾಗುತ್ತದೆಯೇ ? ಆದ್ದರಿಂದ ಸರಕಾರದವರು ಇದುವರೆಗೂ ಈ ಕಾಯ್ದೆಯ ಪ್ರಕಾರ ಹೆಚ್ಚುವರಿ ಭೂಮಿ ಇಷ್ಟು ಇದೆಯೆಂದು ಏತಕ್ಕಾಗಿ ಗುರುತಿಸಿಲ್ಲ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ತಮಗೂ ಗೊತ್ತಿದೆ, ಲ್ಯಾಂಡ್ ಟ್ರಿಬುನಲ್ ಏನಿದೆ, ಇದು ಸುಪ್ರೀಮ್ ಇದರ ಮೇಲೆ ಹೈಕೋರ್ಟ್‌ಗಾಗಲೀ, ಮುನ್ಸಿಫ್ ಕೋರ್ಟ್‌ಗಾಗಲೀ ಯಾವುದೇ ಕೋರ್ಟ್‌ಗಾಗಲೀ ಅಧಿಕಾರ ಇಲ್ಲ . ಇಂಥ ಸಂಪೂರ್ಣವಾದಂಥ ಅಧಿಕಾರವನ್ನು ಇವರಿಗೆ ನಾವು ಕೊಟ್ಟಿದ್ದೇವೆ. ಅದರ ಸದಸ್ಯರಾಗಿ ನಾವು ನಾನ್‌ಅಫಿಷಿಯಲ್ ಮೆಂಬರ್ಸ್‌ಅನ್ನು ನೇಮಕ ಮಾಡಿದ್ದೇವೆ. ಅಧಿಕಾರಿಗಳು ಅಥವಾ ಡಿಕ್ಲರೆಂಟ್ ಸುಳ್ಳು ಮಾಹಿತಿಗಳನ್ನು ಕೊಟ್ಟರೆ ಅದನ್ನು ನಾನ್‌ಅಫಿಷಿಯಲ್ ಮೆಂಬರ್ಸ್ ಗುರುತಿಸಲಿ ಎಂಬ ಉದ್ದೇಶ ಇಟ್ಟುಕೊಂಡು ಈ ರೀತಿ ಮಾಡಿದ್ದೇವೆ. ಇದು ಎಕ್ಸೆಸ್ ಆಗಿದೆಯೇ, ಇಲ್ಲವೋ, ಎಷ್ಟು ಸರ್‌ಪ್ಲಸ್ ಆಗುತ್ತದೆಯೋ ಇಲ್ಲವೋ ಎಂದು ಡಿಟರ್ಮಿನ್ ಶಕ್ತಿ ಆ ಲ್ಯಾಂಡ್ ಟ್ರಿಬ್ಯುನಲ್ಸ್‌ಗೆ ಇದೆ ಅಂದಾಗ ಮಿನಿಸ್ಟರಾಗಿ ನಾನೂ ಡೈರೆಕ್ಷನ್ ಕೊಡೋಹಾಗಿಲ್ಲ. ಅವರ ವರ್ಕ್ ಅನ್ನು ರಿವ್ಯೂ ಮಾಡಬಹುದೇಹೊರತು

ನೀವು ಇದೇ ರೀತಿ ನಿರ್ಣಯ ಕೊಡಿ ಅಂತ ಡೈರೆಕ್ಷನ್ ಕೊಡುವ ಅಧಿಕಾರ ಸಹಿತ ನನಗಿಲ್ಲ. ಈವನ್ ಹೈಕೋರ್ಟ್‌ಗೆ ಕೂಡ ರಿಟ್ ಹೋಗಬಹುದೇ ಹೊರತು, ಮೆರಿಟ್ ಮೇಲೆ ಡಿಸೈಡ್ ಮಾಡುವ ಹಕ್ಕನ್ನು ಕಿತ್ತುಕೊಂಡು ಭೂಸುಧಾರಣಾ ಕಾಯಿದೆಯಲ್ಲಿ ನಾವು ಕೊಟ್ಟಿದ್ದೇವೆ. ಬಹುಶಃ ಈ ಪ್ರಗತಿಪರ ಕಾನೂನು ಇಡೀ ಭಾರತ ದೇಶದಲ್ಲೇ ಇದು ಮೊದಲನೆಯದು ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಟ್ರಿಬ್ಯುನಲ್ ಮಾಡಿದಂಥ ಸರ್‌ಪ್ಲಸ್ ಲ್ಯಾಂಡ್ ಅಂತ ಏನು ಡಿಟರ್‌ಮಿನ್ ಮಾಡಿದೆ ಅದನ್ನು ನಾನು ಹೇಳಿದೆ; ಸುಮಾರು ಡಿಟರ್‌ಮಿನ್ ಮಾಡಿದ್ದು 2,73,613 ಎಕರೆ ಇದೆ ಅಂತ. ಇಷ್ಟಿದ್ದರೂ ಕೂಡ ಕೆಲವು ಜನ ಮಿಸ್‌ರೆಪ್ರಸೆಂಟ್ ಮಾಡಿ ಅಥವಾ ಬೇನಾಮಿ ವ್ಯವಹಾರ ಮಾಡಿ ಬೇರೆಯವರು ಹೆಸರಿನಿಂದ ಡಿಕ್ಲರೇಷನ್ ಕೊಟ್ಟು ಮಾಡಡಿದ್ದಾರೆಂಬುದು ನಮ್ಮ ಗಮನಕ್ಕೂ ಬಂದಿದೆ ಮತ್ತು ಅನೇಕ ಸದಸ್ಯರ ಗಮನಕ್ಕೂ ಬಂದಿರಬಹುದು. ಅದಕ್ಕಾಗೇ ನಾನು ಇವತ್ತು ಒಂದು ಹೊಸ ತಿದ್ದುಪಡಿಯನ್ನು ಈ ಮನೆಯ ಮುಂದೆ ಮಂಡಿಸಿದ್ದೇನೆ. ಅಂದರೆ ಯಾವನೇ ಒಬ್ಬ ಡಿಕ್ಲರೆಂಟ್ ``Tribunals are empowered to review their own orders *suo-moto* or otherwise after such enquiry as it considers necessary that an order under Section 67 has been obtained by fraud, mis-representation or suppression of facts or by furnishing false information, incorret or incomplete declaration within a period of two years from the date of such order. The time for taking up such review had been extended from time to time lastly til! 31.3.83." ಅದನ್ನು ನಾನು ಈ ಕಾನೂನಿನಲ್ಲಿ ಎಕ್ಸ್‌ಟೆಂಡ್ ಮಾಡಿ 31-12-1995 ಮಾಡಿದ್ದೇನೆ ಅಂದರೆ ಯಾವುದೇ ಫ್ರಾಡ್, ಮಿಸ್‌ರೆಪ್ರೆಸೆಂಟೇಷನ್ ಆಗಲಿ, ಸಪ್ರಷನ್ ಆಫ್ ಫ್ಯಾಕ್ಟ್ ಆಗಲೀ ಅವನು ಫರ್ನಿಷ್ ಮಾಡಿದ್ದರೆ ಅಂಥಹ ಎಲ್ಲಾ ಕೇಸ್‌ಗಳನ್ನು ಪುನಃ ರಿವ್ಯೂ ಮಾಡುತ್ತೇವೆ.

ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬಂದರಿನಲ್ಲಿ ಜಟ್ಟಿ ನಿರ್ಮಾಣ

446 (2233) ಶ್ರೀ ಪಿ. ಬಸವರಾಜ (ಬ್ರಹ್ಮಾವರ)-

ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬಂದರಿನಲ್ಲಿ ಜಟ್ಟಿ ನಿರ್ಮಿಸುವ ಕುರಿತಂತೆ ಈ ಪರಿಸರದ ನಾಗರೀಕರು ಸತತವಾಗಿ ಒತ್ತಾಯಿಸಿಗುವುದು ಇಲಾಖೆಗೆ ತಿಳಿದಿದೆಯಲ್ಲವೆ;

ಆ) ಈ ಸಂಬಂಧ ಮೀನುಗಾರಿಕಾ ಇಲಾಖೆಯ ನಿರ್ದೇಶಕರಿಂದ ಪ್ರಸ್ತಾವನೆ ಸರ್ಕಾರಕ್ಕೆ ತಲುಪಿದೆಯೆ ;

ಇ) ತಲುಪಿದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಬಂದರಿನ ಜಟ್ಟಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎ. ಎಂ. ಬೆಳ್ಳಿಯಪ್ಪ:(ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು.)-

ಅ) ಹೌದು.

ಆ) ಹೌದು.

ಇ) ಈ ವಿಷಯ ಪರಿಶೀಲನೆಯಲ್ಲಿದೆ. ಈ ಕೆಲಸವನ್ನು ಕೇಂದ್ರ ಪುರಸ್ಕೃತ